ಕಂಡೊಡನೆಯೇ ನವಿರಾದ ಮುಗುಳ್ನಗುವೊಂದನ್ನು ಬೀರಬೇಕು, ಸ್ಟೈಲಿಶ್ ಆಗಿ ಮಾತನಾಡಬೇಕು ಎಂದೆಲ್ಲಾ ಹೊರಡುವುದಕ್ಕೂ ಮೊದಲು ವಿಧಿಸಿಕೊಂಡಿದ್ದ ಶರತ್ತು ಅವಳನ್ನು ಕಂಡೊಡನೆ ಮೂಡಿದ ಆತಂಕದಲೆಗಳ ನಡುವೆ ಮರೆತೇ ಹೋಯಿತು.

“ಬಹಳ ಹೊತ್ತಾಯ್ತಾ ಬಂದು?”

ಯಾವುದೋ ಹಳೆಯ ಗೆಳೆಯನೊಡನೆ ಮಾತನಾಡುತ್ತಿರುವಂತಹ ತಣ್ಣಗಿನ ಧಾಟಿಯಲ್ಲಿ ಕೇಳುತ್ತಾ ಎದುರಿಗಿನ ಕುರ್ಚಿಯಲ್ಲಿ ಕುಳಿತಳು ವೈಶಾಲಿ. ಅರೆಕ್ಷಣ ಉತ್ತರಿಸುವುದನ್ನೂ ಮರೆತು ಅವಳನ್ನೇ ನೋಡುತ್ತಾ ಕುಳಿತುಬಿಟ್ಟೆ. ಕಣ್ಣಿಗೆ ಗಾಢವಾಗಿ ಬಳಿದ ಕಾಡಿಗೆಗೆ ಈ ಲೋಕದ ಯಾವ ಕಪ್ಪೂ ಸರಿಸಮ ಅಲ್ಲವೆನಿಸಿತು. ಒಂದಷ್ಟು ಕೂದಲುಗಳು ಅವಳ ನೆತ್ತಿಯ ನಡುವಿನ ಬೈತಲೆಯಿಂದ ತಪ್ಪಿಸಿಕೊಂಡು ಸ್ವತಂತ್ರವಾಗಿ ಗಾಳಿಯೊಂದಿಗೆ ನರ್ತಿಸುತ್ತಿದ್ದವು. ಯಾವುದೋ ಆಕಾಶಗಂಗೆಯ ಸುಂದರ ತಾರೆಯನ್ನು ಹೋಲುವ ಬಿಂದಿಯೊಂದು ಹಣೆಯ ಮಧ್ಯೆ ಮಿಣಿಮಿಣಿ ಹೊಳೆಯುತ್ತಿತ್ತು. ಮೊಳದುದ್ದ ಗುಂಗುರು ಕೂದಲು ಜಲಪಾತದಿಂದ ಹಾರಹಾರುತ್ತಲೇ ಘನೀಭವಿಸಿದ ಕಪ್ಪು ನೀರಿನಂತೆ ಕ್ಲಿಪ್ಪಿನಲ್ಲಿ ಬಂಧಿಸಲ್ಪಟ್ಟಿತ್ತು. ಒಟ್ಟಾರೆ ಸರಳ ಸಿಂಗಾರ ಅವಳಲ್ಲಿ ಅಪೂರ್ವವಾದ ಸೌಂದರ್ಯವನ್ನು ಸೃಷ್ಟಿಸಿತ್ತು.

ಈ ಸಿಂಗಾರ ನನಗಾಗಿಯೇ ಏನು?

“ನನಗೆ ತುಂಬಾ ಹಸಿವಾಗಿದೆ. ಇಫ್ ಯೂ ಡೋಂಟ್ ಮೈಂಡ್, ಏನಾದರೂ ತಿನ್ನುತ್ತಲೇ ಮಾತಾಡೋಣ್ವಾ?”

ಮೆನುವನ್ನು ತೆರೆಯುತ್ತಾ ಹಾಗೆಂದವಳು ಮರುಕ್ಷಣ ಅದನ್ನು ನನಗೇ ಕೊಟ್ಟು, “ನನಗೂ ಸೇರಿಸಿ ಏನಾದರೂ ಆರ್ಡರ್ ಮಾಡಿ. ನಾನು ವಾಶ್‌ರೂಮ್‌ಗೆ ಹೋಗಿ ಬರುತ್ತೇನೆ” ಎಂದು ಹೊರಟೇಹೋದಳು. ದಿಕ್ಕೇ ತೋಚದಾಯಿತು. ನನಗೆ ರೆಸ್ಟೋರೆಂಟುಗಳು ಹೊಸತಲ್ಲವಾದರೂ ಈ ಪಿಜ್ಜಾಗಳ ಸಂಗತಿ ಇದೇ ಮೊದಲಾಗಿತ್ತು. ಯಾರೋ ಆರ್ಡರ್ ಮಾಡಿದ ಪಿಜ್ಜಾವನ್ನು ಕತ್ತರಿಸಿ ತಿಂದು ಗೊತ್ತಿತ್ತೇ ಹೊರತು ಅವುಗಳ ಫ್ಲೇವರ್, ಮಿಕ್ಸ್ ಮುಂತಾದವುಗಳ ಗಂಧಗಾಳಿಯೂ ಗೊತ್ತಿರಲಿಲ್ಲ. ಹತ್ತಾರು ಜಾತಿ, ಪ್ರಜಾತಿಗಳ ವಿವರಗಳಿದ್ದ ಮೆನು ಕಾರ್ಡಿನಲ್ಲಿ ನನಗೆ ಅರ್ಥವಾದ ಒಂದೇ ಒಂದು ಸಂಗತಿಯೆಂದರೆ ಎಪ್ಪತ್ತೈದರಿಂದ ಆರಂಭವಾಗಿ ಸಾವಿರದ ತನಕ ಇದ್ದ ಅವುಗಳ ದರ ಮಾತ್ರ!

ಈಗೇನು ಮಾಡುವುದು? ನೂರು, ಸಾವಿರ, ಲಕ್ಷ ಸಂಗತಿಗಳಿರುವ ಈ ಪ್ರಪಂಚದಲ್ಲಿ ಯಃಕಶ್ಚಿತ್ ಪಿಜ್ಜಾದ ಕುರಿತಾದ ಜ್ಞಾನ ಸಹ ನನ್ನ ಬದುಕಿನಲ್ಲಿ ಇಷ್ಟು ಮುಖ್ಯ ಪಾತ್ರ ವಹಿಸುತ್ತದೆಂದು ನಾನು ಕನಸಿನಲ್ಲೂ ಎಣಿಸಿರಲಿಲ್ಲ. ಅಷ್ಟಕ್ಕೂ ನನ್ನನ್ನು ಪರೀಕ್ಷಿಸಲೆಂದೇ ವೈಶಾಲಿ ಹೀಗೆ ಮೆನು ಕೈಲಿಟ್ಟು ಹೋಗಿಲ್ಲ ತಾನೇ? ಈ ಹುಡುಗಿಯರು ತುಂಬಾ ಸೂಕ್ಷ್ಮ. ಹುಡುಗನ ಟೇಸ್ಟು ಎಂಥಾದ್ದು, ಮನಃಸ್ಥಿತಿ ಎಂಥಾದ್ದು, ಅವನು ಜೊತೆಗೆ ಬದುಕಲಿಕ್ಕೆ ಯೋಗ್ಯನಾ ಎಂಬುದನ್ನೆಲ್ಲಾ ಹೀಗೆ ಸಣ್ಣ ಸಣ್ಣ ನಡವಳಿಕೆಗಳಿಂದಲೇ ಅಳೆದು ನಿರ್ಧರಿಸಿಬಿಡುತ್ತಾರೆ. ವೈಶಾಲಿಯೂ ಹಾಗೇ ಮಾಡುತ್ತಿರಬಹುದೇ?

“ಏನು ಆರ್ಡರ್ ಮಾಡಿದ್ರೀ?”

ವಾಶ್‌ರೂಮಿನಿಂದ ಮರಳಿ ಬಂದ ವೈಶಾಲಿ ನನ್ನೆದುರು ಕೂರುತ್ತಾ ಹಾಗೆಂದು ಕೇಳಿದಾಗ ನಾನು ಪೆಚ್ಚು ಮೋರೆ ಹಾಕಿಕೊಂಡು ಅವಳತ್ತಲೇ ನೋಡತೊಡಗಿದೆ. ನಾನು ಇವಳಿಗೆ ಕಟ್ಟಬೇಕೆಂದಿದ್ದ ಮೂರು ಗಂಟುಗಳ ಪೈಕಿ ಮೊದಲನೆಯದನ್ನು ಈ ಯಃಕಶ್ಚಿತ್ ಪಿಜ್ಜಾ ಬಿಚ್ಚಿಹಾಕಿತೇನೋ ಅನ್ನಿಸಿತು.

“ಅದೂ... ಸಾರಿ ವೈಶಾಲಿ ಅವರೇ. ನಂಗೆ ಈ ಪಿಜ್ಜಾಗಳ ಬಗ್ಗೆ ಅಷ್ಟಾಗಿ ಗೊತ್ತಿಲ್ಲ. ನನಗೂ ಸೇರಿಸಿ ನೀವೇ ಆರ್ಡರ್ ಮಾಡಿಬಿಡಿ ಪ್ಲೀಸ್.”